# ನಿಮ್ಮ ಒಳ್ಳೇದಕ್ಕೇ



**ವಸುಮತಿ ಉಡುಪ**

ಕಲೆ: ಎಸ್. ವಿ. ಹೂಗಾರ್

‘ಒಂದು ಬಾಡಿಗೆ ಮನೆ ಹುಡುಕ್ತೀನಿ. ಕುಸುಮನ ಜೊತೆ ನೀನೂ ಅಲ್ಲಿಗೆ ಬಂದ್ಬಿಡು. ಅವಳನ್ನ ಓದಿಸಿದ ಹಾಗೂ ಆಯ್ತು. ನಮಗೆ ಅಡುಗೆ ಮಾಡಿ ಹಾಕೋಕೆ ನೀನು ಜೊತೆಗಿದ್ದ ಹಾಗೂ ಆಯ್ತು. ಏನಂತಿ?' ಕೇಳಿದ ಕರುಣಾಕರ.

ಬೆರಗಿನಿಂದ ಮಗನ ಮುಖ ನೋಡಿದಳು ಕಮಲಾಕ್ಷಿ.

‘ಬೆಂಗಳೂರು ಪೇಟೇಲಿ ಮನೆ ಮಾಡೋದು ಅಂದ್ರೆ ಹುಡುಗಾಟಾನಾ? ಮೊದಲು ನಿನ್ನ ಕಾಲ ಮೇಲೆ ಬಲವಾಗಿ ನಿಲ್ಲೋದನ್ನ ಕಲಿ. ಆಮೇಲೆ ಮುಂದಿನ ಮಾತು...'

‘ಹೆಂಗೋ ಆಗುತ್ತೆ ಅಮ್ಮಾ, ಬಾಡಿಗೆಮನೆ ಅಂದ್ರೆ ನಮ್ಮ ಯೋಗ್ತಿಗೆ ತಕ್ಕಂತಾದ್ದು. ಮೂರು ಜನ ಕಾಲು ಚಾಚಿ ಮಲಗೋಕೆ ಸಾಕಾಗೋವಂತಾದ್ದು'

‘ಅಷ್ಟು ಕಷ್ಟಪಟ್ಟು ಯಾಕೆ ಬದುಕ್ಬೇಕು? ಈಗ ಇಲ್ಲಿ ಕಮ್ಮಿ ಆಗಿರೋದೆಂತದು?'

‘ಏನೂ ಗೊತ್ತಿಲ್ದಿರೋರ ಹಂಗೆ ಮಾತಾಡ್ಬೇಡ. ಕುಸುಮ ಅಲ್ಲೇ ಕಾಲೇಜಿಗೆ ಸೇರ್ಕಂತಾಳೆ'

‘ಮುಗೀತಲ್ಲ ಆ ಮಾತು? ಬಾವ ಬ್ಯಾಡಾಂದ್ರಲ್ಲ?'

‘ಹಿರಿಯಪ್ಪ ಹೇಳಿದ್ರೆ ಮುಗೀತಾ? ಅವಳಿಗೂ ಅವಳ ಆಸೆ ಅಂತ ಇರಲ್ವಾ? ಅವಳು ಎಂಜಿನಿಯರಿಂಗ್ ಓದ್ಬೇಕು ಅಂತ ಬೆಟ್ಟದಷ್ಟು ಆಸೆ ಇಟ್ಕೊಂಡಿದಾಳಲ್ಲ? ಇಲ್ಲೆಲ್ಲಿದೆ ಎಂಜಿನಿಯರಿಂಗ್ ಕಾಲೇಜು?'

‘ಅವಳು ಹೇಳಿದ್ದಕ್ಕೆಲ್ಲಾ ಕುಣಿಯೋಕಾಗುತ್ತಾ? ಬಾವ ಹೇಳ್ಬಿಟ್ಟಿದಾರಲ್ಲ?'

‘ಮತ್ತೆ ಅದೇ ಮಾತಾಡ್ಬೇಡ. ನೀನೂ ಸ್ವಲ್ಪ ಯೋಚ್ನೆ ಮಾಡು'

ಕರುಣಾಕರ ಅಮ್ಮನಿಗೆ ಯೋಚಿಸಲು ಸ್ವಲ್ಪ ಕಾಲಾವಕಾಶ ಕೊಟ್ಟಿದ್ದ. ಅವಳು ಏನೇ ಹೇಳಲಿ, ಅವನ ನಿಶ್ಚಯ ಧೃಡವಾಗಿತ್ತು. ‘ಇಲ್ಲೇ ಸೇರ್ಕೋ, ಬಸ್ಸಿಗೆ ಬರಗಾಲಾನಾ?' ಎನ್ನುವ ಹಿರಿಯಪ್ಪನ ಮಾತಿಗೆ ಬದಲು ಹೇಳಲಾಗದೆ, ಹೇಳಲು ಬೇಕಾದ ಧೈರ್ಯ ಆ ಪರಿಸ್ಥಿತಿಯಲ್ಲಿ ಸಾಕಾಗದೆ, ದಿನಾ ಬಸ್ಸಲ್ಲಿ ಗುದ್ದಾಡಿಕೊಂಡು ಓಡಾಡಿ ಓದಿದವನು ಕರುಣಾಕರ. ಬಾವ ಅಂದರೆ ಅಮ್ಮನಿಗೆ ದೇವರ ಸಮಾನ. ಅಥವಾ ಅದಕ್ಕಿಂತಾ ಒಂದು ಗುಲಗುಂಜಿ ತೂಕ ಹೆಚ್ಚೇ ಅಭಿಮಾನ. ‘ಬಿಟ್ಟು ಹಾಕಲಿಲ್ಲ ನಿನ್ನ ಹಿರಿಯಪ್ಪ. ಸ್ವಂತ ಮಕ್ಕಳು, ತಮ್ಮನ ಮಕ್ಕಳು ಅಂತ ಭೇದಭಾವ ಮಾಡಲಿಲ್ಲ. ತೌರುಮನೆಗೆ ಹೋಗಿ ಸೇರ್ಕಂಡಿದ್ದಿದ್ರೆ ಕಸಕ್ಕಿಂತಾ ಅತ್ತತ್ತ ಆಗ್ಬೇಕಿತ್ತೇನೋ. ಈಗ ನೋಡು, ನಮ್ಮ ಅನ್ನ ನಾವು ತಿಂದ್ಕಂಡು ಸುಖವಾಗಿದೀವಿ' ಅನ್ನುವಾಗ ಅಮ್ಮನ ಕಣ್ಣು ಒದ್ದೆ. ಕಂಠ ಗದ್ಗದ. ಹೌದು, ತಮ್ಮ ಅನ್ನ ತಾವು ತಿಂದುಕೊಂಡಿರುವುದರಲ್ಲಿ ಹಿರಿಯಪ್ಪನಿಗ್ಯಾಕೆ